ರಾಜ್ಯದಲ್ಲಿ ಮುಂದುವರೆದ ಶಿಕ್ಷಣ ಯೋಜನೆ

4544 (5138) : ಶ್ರೀ ನಾರಾಯಣ ಸ್ವಾಮಿ .ಎ. (ಆನೇಕಲ್) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮುಖ್ಯ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಂದುವರೆದ ಶಿಕ್ಷಣ ಯೋಜನೆಗೆ ಗುರುತಿಸಿರುವ ಸೇವಾಸಂಸ್ಥೆಗಳು ಯಾವುವು: (ತಾಲ್ಲೂಕುವಾರು ವಿವರ ನೀಡುವುದು).

ಆ) ಸದರಿ ಯೋಜನೆಗೆ ಬಿಡುಗಡೆಗೊಳಿಸುವ ಹಣದ ತಾಲ್ಲೂಕುವಾರು ವಿವರ ನೀಡುವುದು?

ಇ) ಸದರಿ ಯೋಜನೆಯ ಅನುಷ್ಠಾನದ ವಿಳಂಬಕ್ಕೆ ಕಾರಣಗಳೇನು?

ಈ) ಅಧಿಕಾರಿಗಳ ಕೆಲಸದ ಒತ್ತಡದಿಂದ ಈ ಯೋಜನೆಯ ಅನುಷ್ಠಾನದ ವಿಳಂಬ ತಪ್ಪಿಸಲು ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿರುವುದು ನಿಜವೇ?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಮುಂದುವರಿಕೆ ಶಿಕ್ಷಣ ಯೋಜನೆಯನ್ನು ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಸಾಕ್ಷರತಾ ಸಮಿತಿಗಳ ಮೂಲಕ ಅನುಷ್ಠಾನೊಳಿಸಲಾಗುತ್ತಿದೆ. ಜಿಲ್ಲಾ ಸಾಕ್ಷರತಾ ಸಮಿತಿಗಳು ನೊಂದಾಯಿತ ಸ್ವಾಯತ್ತ ಸೇವಾ ಸಂಸ್ಥೆಗಳಾಗಿರುತ್ತವೆ. ಮುಂದುವರಿಕೆ ಶಿಕ್ಷಣ ಕೇಂದ್ರದ ನಿರ್ವಹಣೆಯನ್ನು ಸ್ಥಳೀಯ ಗ್ರಾಮ/ವಾರ್ಡ್ ಸಾಕ್ಷರತಾ ಸಮಿತಿಗಳು ಮಾಡುತ್ತಿವೆ. ಈ ಸಮಿತಿಗಳಲ್ಲಿ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಇರುತ್ತಾರೆ.

ಆ) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ ಅನುದಾನವನ್ನು ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಜಿಲ್ಲಾ ಸಾಕ್ಷರತಾ ಸಮಿತಿಯು ಗ್ರಾಮಗಳಲ್ಲಿರುವ ಕೇಂದ್ರಗಳ ನಿರ್ವಹಣಾ ಸಮಿತಿಗಳ ಮೂಲಕ ಅನುದಾನ ಬಳಕೆ ಮಾಡುತ್ತದೆ. ಆದ್ದರಿಂದ ಯೋಜನೆಗೆ ಬಿಡುಗಡೆ ಮಾಡಲಾದ ಜಿಲ್ಲಾವಾರು ವಿವರ ಕೆಳಗಿನಂತಿದೆ.

1.	ಬಾಗಲಕೋಟೆ	101.43
2.	ದಾವಣಗೆರೆ	241.91
3.	ಕೊಪ್ಪಳ	206.08
4.	ತುಮಕೂರು	445.32
5.	ಚಿತ್ರದುರ್ಗ	366.86
6.	ಬೀದರ್	232.97
7.	ಹಾವೇರಿ	245.3
8.	ಮೈಸೂರು	353.66
9.	ಉತ್ತರ ಕನ್ನಡ	226.58
10.	ದಕ್ಷಿಣ ಕನ್ನಡ	301.59
11.	ಉಡುಪಿ	217.93
12.	ಬಳ್ಳಾರಿ	97.91

13.	ಮಂಡ್ಯ	123.19
14.	ಶಿವಮೊಗ್ಗ	112.21
15.	ಕೊಡಗು	79.38
16.	ರಾಯಚೂರು	104.07
17.	ಬಿಜಾಪುರ	118.92
18.	ಚಿಕ್ಕಮಗಳೂರು	78.59
19.	ಚಾಮರಾಜನಗರ	148.58
20.	ಬೇಸಿನ್	456.14
21.	ಬೆಂಗಳೂರು ಗ್ರಾ.	342.65
22.	ಕೋಲಾರ	342.65
23.	ಬೆಂಗಳೂರು ನಗರ	188.35

ಇ) ಮುಂದುವರಿಕೆ ಶಿಕ್ಷಣ ಕೇಂದ್ರ, ಸ್ಥಾಪಿಸಲು ಕಟ್ಟಡ, ನಿರ್ವಹಣ ಸಮಿತಿ ಮತ್ತು ಪ್ರೇರಕರ ಆಯ್ಕೆ ಅಗತ್ಯವಾಗಿರುತ್ತದೆ. ಜಿಲ್ಲೆಗೆ ಮಂಜೂರಾಗಿರುವ ಜಿಲ್ಲಾ ಕೇಂದ್ರಗಳಿಗೆ ಕಟ್ಟಡದ ವ್ಯವಸ್ಥೆ, ಕೇಂದ್ರದ ನಿರ್ವಹಣಾ ಸಮಿತಿಯ ರಚನೆ ಮತ್ತು ಕೇಂದ್ರ ನಡೆಸುವ ಪ್ರೇರಕ ಉಪಪ್ರೇರಕರ ಆಯ್ಕೆಗಾಗಿ ಸಮಯ ತೆಗೆದುಕೊಂಡಿರುತ್ತದೆ.

ಈ) ಇಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಭೂ ಸೇನಾ ನಿಗಮದ ಕಾಮಗಾರಿಗಳು

4545 (5160) : ಶ್ರೀ ನೀಲಕಂಠ ಬಿ.ಆರ್. (ತರೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಭೂಸೇನಾ ನಿಗಮವು 2000-01, 2001-02-2002-03ನೇ ವರ್ಷಗಳಲ್ಲಿ ಎಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಅವು ಯಾವುವು (ಪೂರ್ಣ ವಿವರ ತಿಳಿಸುವುದು)

ಆ) ಇದರಲ್ಲಿ ಪೂರ್ಣ ಆಗದೇ ಇರುವ ಕಾಮಗಾರಿಗಳು ಯಾವುವು? ಕಾಮಗಾರಿ ಪೂರ್ಣಗೊಳಿಸದೇಯಿರಲು ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಕರ್ನಾಟಕ ಭೂಸೇನಾ ನಿಗಮವು ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 132 ಕಾಮಗಾರಿಗಳನ್ನು ತೆಗೆದುಕೊಂಡಿರುತ್ತೆ, ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಪೈಕಿ 82 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 50 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಸದರಿ ಅಪೂರ್ಣ ಕಾಮಗಾರಿಗಳಿಗೆ ನಿವೇಶನ ಹಸ್ತಾಂತರಿಸುವಲ್ಲಿ, ಆಡಳಿತಾತ್ಮಕ ಮಂಜೂರಾತಿ ನೀಡುವಲ್ಲಿ ಹಾಗೂ ಸಕಾಲದಲ್ಲಿ ಹಣ ಬಿಡುಗಡೆ ಮಾಡುವಲ್ಲಿ ವಿಳಂಬವಾಗಿರುವುದು ಕಾರಣಗಳಾಗಿರುತ್ತದೆ.